

# ಶೀತಲ ನಗರ

ಚಿತ್ರ ನೋಡಿದರೆ 'ಅಬ್ಬಾ ಎಷ್ಟು ಸುಂದರ!' ಎನಿಸದೆ ಇರದು. ಇದು ಚೀನಾದ ಹರ್ಬಿನ್‌ನ ಶೀತಲ ನಗರ. ಹಾಗಂತ ಇದೇನು ಚೀನಾದ ಹೊಸ ನಗರವೇ ಎಂದು ಕೇಳಬೇಡಿ, ಯಾಕೆಂದರೆ ಇದು ತಾತ್ಕಾಲಿಕ ನಗರ. ಇಲ್ಲಿನ ಕಟ್ಟಡಗಳು, ಶಿಲ್ಪಗಳು, ಮೋಜಿನ ತಾಣಗಳು ಎಲ್ಲವೂ ಮಂಜುಗಡ್ಡೆಯಿಂದ ನಿರ್ಮಿಸಿದ್ದು.

ಪ್ರತಿ ವರ್ಷ ಜನವರಿ ತಿಂಗಳಲ್ಲಿ ಚೀನಾದ ಹರ್ಬಿನ್‌ನಲ್ಲಿ ಅಂತರಾಷ್ಟ್ರೀಯ ಮಂಜುಗಡ್ಡೆ ಶಿಲ್ಪ ಉತ್ಸವ ನಡೆಯುತ್ತದೆ. ಈ ಮೊದಲು ಚೀನಾ ದೇಶದ ಪ್ರಜೆಗಳು ಮಾತ್ರ ಭಾಗವಹಿಸುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ವಿದೇಶಗಳಿಂದ ಭಾರೀ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿರುವುದರಿಂದ ಈ ಶೀತಲ ಉತ್ಸವಕ್ಕೆ ಅಂತರಾಷ್ಟ್ರೀಯ ಮನ್ನಣೆ ಬಂದಿದೆ.

ಇಲ್ಲಿ ಅರಮನೆ, ಐತಿಹಾಸಿಕ ತಾಣಗಳ ಪ್ರತಿಕೃತಿ, ಜಗತ್ತಿನ ಅದ್ಭುತಗಳ ಚಿತ್ರಣ ಹೀಗೆ ಹಲವು ವೈವಿಧ್ಯಗಳ ಲೋಕವೇ ಮಂಜಿನಲ್ಲಿ ನಿರ್ಮಾಣವಾಗಿರುತ್ತದೆ. ಸನ್ ಐಲ್ಯಾಂಡ್, ಐಸ್ ಅಂಡ್ ಸ್ನೋ ಅಮ್ಯೂಸ್‌ಮೆಂಟ್ ಪಾರ್ಕ್ ಮತ್ತು ಮಕ್ಕಳ ಮೋಜಿನ ತಾಣ ಇಲ್ಲಿನ ಪ್ರಮುಖ ಆಕರ್ಷಣೆ.

ಈ ಶೀತಲ ನಗರವನ್ನು ನಿರ್ಮಿಸಲು ಸಮೀಪದ ಸೊಂಗ್ವಾ ನದಿಯಲ್ಲಿ ಹೆಪ್ಪುಗಟ್ಟಿದ ಮಂಜುಗಡ್ಡೆಯನ್ನು ಒಡೆದು ತರುತ್ತಾರೆ. ಸುಮಾರು 10,000ಕ್ಕೂ ಅಧಿಕ ಕಾರ್ಮಿಕರು ಡಿಸೆಂಬರ್‌ನಲ್ಲೇ ಕೆಲಸ ಆರಂಭಿಸಿ ಈ ಸುಂದರ ನಗರಿಯನ್ನು ನಿರ್ಮಿಸುತ್ತಾರೆ. ಇಲ್ಲಿನ ಕಟ್ಟಡ ಮತ್ತು ಶಿಲ್ಪಕ್ಕೆ ಎಲ್‌ಇಡಿ ಬಲ್ಬ್‌ನ ಅಲಂಕಾರ ಮಾಡುವುದರಿಂದ ಇಡೀ ನಗರವೇ ಕಿನ್ನರಲೋಕದಂತೆ ಭಾಸವಾಗುತ್ತದೆ.

ಅಂದಹಾಗೆ ಈ ನಗರವನ್ನು ಪ್ರವೇಶಿಸಿ ಆನಂದಿಸಲು ಒಬ್ಬರಿಗೆ 300 ಯುವಾನ್ (ಸುಮಾರು 2,900 ರೂಪಾಯಿ) ಪ್ರವೇಶ ಶುಲ್ಕವಿದೆ. ಮಧ್ಯಾಹ್ನದ ಬಳಿಕ ಹೋದರೆ ಸಂಜೆಯ ವಿದ್ಯುತ್ ದೀಪಾಲಂಕೃತ ಶೀತಲ ನಗರ ಸೌಂದರ್ಯ ಸವಿಯಬಹುದು. ಜನವರಿಯಲ್ಲಿ ಬೇಗನೆ ಹೋದರೆ ಒಳ್ಳೆಯದು, ಯಾಕೆಂದರೆ ತಿಂಗಳ ಕೊನೆಯಾಗುತ್ತಿದ್ದಂತೆ ಹವಾಮಾನ ಮತ್ತು ಬಿಸಿಲಿನ ಹೊಡೆತಕ್ಕೆ ಸಿಲುಕಿ ಶೀತಲ ನಗರಿ ಕರಗಲಾರಂಭಿಸುತ್ತದೆ.

■ **ಕಿರಣ್ ಇಜಿಮಾನ್**



